"ನಾನು ಟಿಫಿನ್ ತಗೊಂಡು ಬರ್ತೀನಿ. ನಿಮಗೂ ತರಬೇಕೆ?" ಕೇಳಿದೆ ಅವರನ್ನು.

"ಬೇಡ. ಇಷ್ಟು ಹೊತ್ತಿಗೆ ತಿನ್ನುವ ಅಭ್ಯಾಸ ನನಗಿಲ್ಲ. ನೀವು ಏಳುವ ಮುಂಚೆ ಕಾಫಿ ತೆಗೆದುಕೊಂಡು ಕುಡಿದೆ..." ಎಂದರಾತ.

ಕೆಳಗಿಳಿದ ನಾನು ಅಲ್ಲಿಯೇ ತಿಂಡಿ ತಿಂದು ಕೈ ತೊಳೆದುಕೊಂಡು ರೈಲು ಹತ್ತಿದೆ.

ಅವರು ಸೀಟಿನ ಮೇಲೆ ಬಿದ್ದುಬಿಟ್ಟಿದ್ದರು. ಎದೆಯ ಮೇಲೆ ಕೈ ಇಟ್ಟುಕೊಂಡು ಒದ್ದಾಡುತ್ತಿದ್ದರು. ಸುತ್ತ ಇದ್ದವರು ಅವರನ್ನು ನೋಡುತ್ತಾ ನಿಂತಿದ್ದರು.

"ಏನಾಯಿತು?..." ಗಾಬರಿಯಿಂದ ಕೇಳಿದೆ.

"ಹೃದಯಾಘಾತ ಆಗಿರಬೇಕೇನೋ..." ಎಂದರು ಅಲ್ಲಿದ್ದವರಲ್ಲೊಬ್ಬರು.

"ಡಾಕ್ಟರ್‌ನ ಕರ್ಕೊಂಡು ಬರ್ತೀನಿ... ಅಲ್ಲಿಯವರೆಗೂ ಯಾರಾದರೂ ಅವರ ಎದೆಯ ಮೇಲೆ ಕೈ ಆಡಿಸುತ್ತಿರಿ..." ಎಂದವನೇ ರೈಲಿನಿಂದ ಇಳಿದು ಹತ್ತಿರದಲ್ಲೇ ಇದ್ದ ಟಿ.ಟಿ.ಗೆ ಹೇಳಿದೆ. ಅವನು ಕೂಡಲೇ ರೈಲ್ವೇ ಡಾಕ್ಟರ್‌ನ ಕಳುಹಿಸಿಕೊಟ್ಟ. ನಾವು ಕಂಪಾರ್ಟ್‌ಮೆಂಟಿಗೆ ಬರುವ ಹೊತ್ತಿಗೆ ಅವರ ಪ್ರಾಣಪಕ್ಷಿ ಹಾರಿಹೋಗಿತ್ತು. ಆ ವಿಷಯವನ್ನು ಡಾಕ್ಟರ್ ದೃಢೀಕರಿಸಿದ.

"ಅವರೊಡನೆ ಅವರ ಕಡೆಯವರು ಯಾರಾದರೂ ಇದ್ದಾರಾ?" ಡಾಕ್ಟರ್ ಕೇಳಿದ.

"ಇಲ್ಲ. ನಾನು ಅವರ ಸಹಪ್ರಯಾಣಿಕ. ನಾನು ಕೂಡ ವಿಶಾಖಪಟ್ಟಣಕ್ಕೆ ಹೋಗ್ತಿದೀನಿ."

"ಇವರ ಶವವನ್ನು ಇಲ್ಲೇ ಇಳಿಸಿಬಿಡ್ತೀವಿ. ಆಂಬುಲೆನ್ಸ್ ವ್ಯವಸ್ಥೆ ಮಾಡ್ತೀವಿ. ದಯವಿಟ್ಟು ನೀವು ಅದರ ಜೊತೆ ಹೋಗಿ ಅವರ ಮನೆಗೆ ಬಾಡಿ ತಲುಪಿಸಿ..." ಎಂದ ಡಾಕ್ಟರ್.

ನನಗೇನೂ ಮಾತನಾಡಲಾಗಲಿಲ್ಲ. ನನ್ನ ಸಾಮಾನಿನ ಜೊತೆಗೆ ಅವರ ಸಾಮಾನನ್ನು ನಾನೇ ಕೆಳಗಿಳಿಸಿದೆ. ಡಾಕ್ಟರ್ ಆಂಬುಲೆನ್ಸ್ ವ್ಯವಸ್ಥೆ ಮಾಡಲು ಹೋದ.

ಅವರು ಯಾರೋ? ಅವರಿಗೆ ಬಂಧುಗಳು ಇದ್ದಾರೋ ಇಲ್ಲವೋ? ವಿಶಾಖಪಟ್ಟಣದಲ್ಲಿ ಅವರ ಮನೆ ಎಲ್ಲಿ ಇದೆಯೋ? ಅದೂ ತಿಳಿಯದು. ಸಂದಿಗ್ಧ ಪರಿಸ್ಥಿತಿ! ಏನು ಮಾಡಬೇಕು, ಒಂದೂ ಅರ್ಥವಾಗಲಿಲ್ಲ. ಸಡನ್ನಾಗಿ ಅವರು ಫೋನಿನಲ್ಲಿ ಸ್ನೇಹಿತನೊಡನೆ ಮಾತನಾಡಿದ್ದು ನೆನಪಾಯಿತು. ಅವರ ಜೇಬಿನಿಂದ ಸೆಲ್ ತೆಗೆದು ಅವರ ಸ್ನೇಹಿತನಿಗೆ ಫೋನು ಮಾಡಿದೆ.

"ಹಲೋ.. ಶೇಷೂ... ವಿಶಾಖಪಟ್ಟಣಕ್ಕೆ ಬಂದಾಯಿತಾ?" ಆ ಕಡೆಯಿಂದ ಕೇಳಿದರು ಯಾರೋ...

"ಅವರು ಸಾಮರ್ಲಕೋಟ ಸ್ಟೇಷನ್ನಿನಲ್ಲಿ ಹೃದಯಾಘಾತದಿಂದ ಹೋಗಿಬಿಟ್ರು. ನಾನು ಅವರ ಸಹಪ್ರಯಾಣಿಕ. ಸಾಮರ್ಲಕೋಟದ ಸ್ಟೇಷನ್ ಡಾಕ್ಟರ್ ಬಂದು ನೋಡಿ ಸಾವನ್ನು ಖಚಿತಪಡಿಸಿದ್ರು. ಇಲ್ಲಿಂದ ಆಂಬುಲೆನ್ಸಿನಲ್ಲಿ ನನ್ನ ಜೊತೆಯಲ್ಲಿ ಕಳಿಸ್ತಿದಾರೆ. ಅವರ ಮನೆ ಎಲ್ಲಿ ಬರುತ್ತೋ ಏನೋ ನನಗೊಂದೂ ಗೊತ್ತಿಲ್ಲ..." ಎನ್ನುತ್ತಾ ವಿಷಯವನ್ನು ಸಂಕ್ಷಿಪ್ತವಾಗಿ ತಿಳಿಸಿದೆ.

"ಅಯ್ಯೋ ಹೀಗಾಯ್ತಾ? ಇಲ್ಲಿ ಅವರ ಸಂಬಂಧಿಕರು ಯಾರೂ ಇಲ್ಲ. ಅವರ ಜೇಬಿನಲ್ಲಿ ಒಂದು ಚಿಕ್ಕ ಪುಸ್ತಕ ಇರುತ್ತೆ. ಅದರಲ್ಲಿ ಅವರ ಮನೆ ವಿಳಾಸ ಇರುತ್ತೆ. ದಯಮಾಡಿ ಅವರನ್ನು ಅಲ್ಲಿಗೆ ಸೇರಿಸಿ. ನಾನೂ ಅಲ್ಲಿಗೆ ಬರೋ ಪರಿಸ್ಥಿತಿಯಲ್ಲಿ ಇಲ್ಲ. ಆಸ್ಪತ್ರೆಯಲ್ಲಿದೀನಿ..." ವ್ಯಥೆಯಿಂದ ನುಡಿದರು ಆತ.

"ಹಾಗಾದ್ರೆ ಮುಂದೇನು ಮಾಡೋದು?" ಆತಂಕದಿಂದ ಕೇಳಿದೆ.

"ಅವರ ಸೆಲ್ಲಿನಲ್ಲಿ ವಕೀಲರ ನಂಬರ್ ಒಂದಿರುತ್ತೆ. ದಯಮಾಡಿ ಅವರಿಗೆ ಫೋನು ಮಾಡಿ. ಮುಂದಿನದನ್ನು ಅವರು ನೋಡಿಕೊಳ್ತಾರೆ..."

ಅವರ ಮಾತು ಮುಗಿಯುವ ಮುನ್ನವೇ ಆಂಬುಲೆನ್ಸ್ ಬಂತು. ಆ ಹಿರಿಯರ ಶವವನ್ನು ಅದರೊಳಗೆ ಹತ್ತಿಸಿದರು. ನಾನು ಚಾಲಕನ ಪಕ್ಕ ಕುಳಿತುಕೊಂಡೆ. ದಾರಿಯಲ್ಲಿ ವಕೀಲರ ನಂಬರಿಗೆ ಫೋನು ಮಾಡಿದೆ. ಆ ಕಡೆಯಿಂದ ಕರೆ ಸ್ವೀಕರಿಸಲಿಲ್ಲ. ವಿಶಾಖಪಟ್ಟಣ ಸೇರಿದಮೇಲೆ